ಎಂ ವಿ ಸಿ ಸಂಖ್ಯೆ 866/2024

ಆರ್ ಡಬ್ಲ್ಯೂ-1

**(ದಿನಾಂಕ 06.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ ವಿ ಜಿ ಪಿ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ಅಥರೈಜೇಶನ್ ಪತ್ರವನ್ನು ನಿ ಆರ್ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಸ್ ಜೆ ಕೆ ವಕೀಲರಿಂದಃ-**

ನಾನು 15 ವರ್ಷ ದಿಂದ ಚಾಲಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ದಿನಾಂಕ 14.05.2024 ರಂದು ಅಪಘಾತ ಆದ ಬಗ್ಗೆ ಪೋಲೀಸರು ನನ್ನ ವಿರುದ್ದ ಪ್ರಥಮ ವರ್ತಮಾನ ವರದಿ ನಂತರ ದೋಷರೋಪಣ ಪಟ್ಟಿ ಸಲ್ಲಿರುತ್ತಾರೆ ಎಂದರೆ ಸರಿ. ಭದ್ರುವತಿ ನ್ಯಾಯಾಲಯದಲ್ಲಿ ನಾನು ಅಪರಾಧಿಕ ಮೊಕದ್ದಮೆಯಲ್ಲಿ ಹಾಜರಾಗಿದ್ದೆ ಎಂದರೆ ಸರಿ. ದೋಷರೋಪಣ ಪಟ್ಟಿಯನ್ನು ನಾನು ಪ್ರಶ್ನೆ ಮಾಡಿಲ್ಲಾ ಎಂದರೆ ಸರಿ. ಪ್ರತಿ ಪ್ರಯಾಣಿಕರಿಗೆ ಟಿಕೇಟ್ ಕೊಡುತ್ತೇವೆ ಎಂದರೆ ಸರಿ. ಪ್ರತಿ ಟಿಕೇಟ್ ನಲ್ಲಿ ಕೂಡ ವಿಮೆಗೆ ಅಂತಾ ಹಣ ವಸೂಲಿ ಮಾಡುತ್ತೇವೆ ಎಂದರೆ ಸರಿ. ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. 2 ನೇ ಎದುರುದಾರರು ಸಲ್ಲಿಸಿರುವ ತಕರಾರನ್ನು ನಾನು ಅಳವಡಿಸಿಕೊಂಡಿರುವುದಿಲ್ಲಾ. ನಾನು ತಕರಾರು ಸಲ್ಲಿಸಿರುವುದಿಲ್ಲಾ. ನಾನು 2 ನೇ ಎದುರುದಾರರ ಪರ ಸಾಕ್ಷಿ ನುಡಿಯುತ್ತಿದ್ದೇನೆ. 2 ನೇ ಎದುರುದಾರರು ನನ್ನ ಮೇಲಾಧಿಕಾರಿ ಆಗಿರುವ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿರುವ ಕಾರಣ ನಾನು ಮತ್ತು 2 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರು ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ಬಸ್ಸಿಗೆ ವಿಮೆ ಇದೆ ಎಂದರೆ ಸರಿ. ಮೃತ

ಎಂ ವಿ ಸಿ ಸಂಖ್ಯೆ 866/2024

ಆರ್ ಡಬ್ಲ್ಯೂ-1

ಗಂಗಮ್ಮ ರವರಿಗೆ ಸಾಕಷ್ಟು ವರಮಾನ ಇತ್ತು ಮತ್ತು ಅವರ ಮರಣ ದಿಂದ ಅಂತ್ಯ ಕ್ರಿಯೇಗೆ ಅರ್ಜಿದಾರರು ಸಾಕಷ್ಟು ಹಣ ವ್ಯಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಂತ್ಯ ಕ್ರಿಯೇ ಅಂತಾ ನಾವು ಈಗಾಗಲೇ 25 ಸಾವಿರ ರೂ ಹಣ ಕೊಟ್ಟಿರುತ್ತೇವೆ. 25 ಸಾವಿರ ರೂ ಪಾವತಿ ಆಗಿರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲಾ ಎಂದರೆ ಸರಿ. 25 ಸಾವಿರ ರೂ ಬಗ್ಗೆ ಪಾವತಿ ರಸೀದಿ ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ಸರಿ. ಅರ್ಜಿದಾರರು ಕೇಳಿದಷ್ಟು ಪರಿಹಾರ ಕೊಡಲು ನಾವು ಬಾದ್ಯಸ್ಥರು ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತಿನ ಮೇರೆಗೆ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.